# ಕರ್ನಾಟಕ ಲೋಕಾಯುಕ್ತ

220

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2022\2014\ಸನಿಕಾಸ–1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 03/11/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸಾರ್ವಜನಿಕ/ ಸರ್ಕಾರಿ ನೌಕರರಾದ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ 1) ತಹಶೀಲ್ದಾರ್‌ರಾಗಿದ್ದ ಶ್ರೀ.ಗಣೇಶ್‌ಮೂರ್ತಿ (ಪ್ರಸ್ತುತ ನಿವೃತ್ತ), 2) ಸಹಾಯಕ ಆಯುಕ್ತರಾಗಿದ್ದ ಶ್ರೀಮತಿ.ಕುಸುಮಕುಮಾರಿ, ಮತ್ತು 3) ಭೂ ಮಾಪಕರಾದ ಶ್ರೀಮತಿ.ಸುಷ್ಮಾ ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕ್ ಕೋಣಂದೂರು ಅಂಚೆ ಮಕ್ಕಿಬೈಲು ನಿವಾಸಿಯಾದ ಶ್ರೀ.ಎ.ಸಿ.ಪೂರ್ಣೇಶ್ ಬಿನ್ ಚೆನ್ನೇಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ 1) ತಹಶೀಲ್ದಾರ್‌ರಾಗಿದ್ದ ಶ್ರೀ.ಗಣೇಶ್‌ಮೂರ್ತಿ (ಪ್ರಸ್ತುತ ನಿವೃತ್ತ), 2) ಸಹಾಯಕ ಆಯುಕ್ತರಾಗಿದ್ದ ಶ್ರೀಮತಿ.ಕುಸುಮಕುಮಾರಿ, 3) ತಹಶೀಲ್ದಾರ್, ತೀರ್ಥಹಳ್ಳಿ ಮತ್ತು 4)ಭೂ ಮಾಪಕರಾದ ಶ್ರೀಮತಿ.ಸುಷ್ಮಾ (ಇನ್ನು ಮುಂದೆ "1 ರಿಂದ 4ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ಕೋಣಂದೂರು ಗ್ರಾಮದ ಸರ್ವೆ ನಂ.186 ಮೂಲತಃ ಶ್ರೀ.ಕೃಷ್ಣಪ್ಪ ಬಿನ್ ನಾರಾಯಣ ಭಟ್ ರವರಿಗೆ ಸಂಬಂಧಿಸಿದ್ದು, ಇವರಿಂದ 1936ನೇ ವರ್ಷದಲ್ಲಿ ಶ್ರೀ ಬೀಮಸೇತು ಮುನಿವೃಂದ ಮಠ, ಬೀಮನಕಟ್ಟೆಯ ಮಠಾಧಿಪತಿಗಳಾದ ಶ್ರೀ ರಘುತೀರ್ಥ ಪಾದಂಗಳ ಕ್ರಯಕ್ಕೆ ಪಡೆದಿದ್ದು, ಕ್ರಯದ ಸಂಖ್ಯೆ:ಎಸ್ ಆರ್ ನಂ.212/36–37ರಂತೆ ನೋಂದಣಿಯಾಗಿದ್ದು, ಎಂಆರ್ ನಂ.6/36–37ರಂತೆ ಶ್ರೀ ರಘುತೀರ್ಥ ಪಾದಂಗಳ ಹೆಸರಿಗೆ ಖಾತಾ ನಮೂದಾಗಿರುತ್ತದೆ. 1936 ರಿಂದ 2000ನೇ ವರ್ಷದವರೆಗೂ ಸದರಿ ಮಠದ ಗುರುಗಳಾದ ಶ್ರೀ ರಘುತೀರ್ಥ ಪಾದಂಗಳ ರವರ

221

ಹೆಸರಿನಲ್ಲಿಯೇ ಖಾತಾ ನಮೂದಾಗಿದ್ದು, 1977ರ ಮೇ ಇಸವಿಯಲ್ಲಿ ಶ್ರೀ ರಘುತೀರ್ಥ ಪಾದಂಗಳ ರವರು ಮರಣ ಹೊಂದಿದ್ದು, ನಂತರ ಶ್ರೀ ಬೀಮಸೇತು ಮುನಿವೃಂದ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ರಘುಮಾನ್ಯ ತಿಲಕ ಪಾದಂಗಳ ರವರು ಆಗಿರುತ್ತಾರೆ. ಸದರಿಯವರು ದಿ:07/10/1980ರಲ್ಲಿ ಶ್ರೀ ಗುರುಮೂರ್ತಿ ಆಚಾರ್ಯ ಎಂಬುವವರಿಗೆ ನೋಂದಾಯಿತ ಅಧಿಕಾರ ಪತ್ರ ಮಾಡಿಕೊಟ್ಟಿದ್ದು, ಸದರಿ ಅಧಿಕಾರ ಪತ್ರದಲ್ಲಿ ಹೇಳಲಾದ ಮಠದ ಎಲ್ಲಾ ಜಮೀನುಗಳನ್ನು ನಿರ್ವಹಿಸಿಕೊಂಡು ಹೋಗಲು ಅಧಿಕಾರ ನೀಡಲಾಗಿದೆ. ಆದರೆ, ಸದರಿ ಗ್ರಾಮದ ಸರ್ವೆ ನಂ.186ರ ಬಗ್ಗೆ ಕಾರ್ಯನಿರ್ವಹಿಸುವಂತೆ ಅಧಿಕಾರ ಪತ್ರದಲ್ಲಿ ತಿಳಿಸಿಲ್ಲ. 1977ರಲ್ಲಿ ಶ್ರೀ ರಘುತೀರ್ಥ ತಿಲಕ ಪಾದಂಗಳ ರವರು ಮರಣ ಹೊಂದಿದ್ದು, ಇವರ ಮರಣ ವಾರಸುದಾರಿಕೆಯಿಂದ ಮಠದ ಗುರುಗಳಾದ ಶ್ರೀ ರಘುಮಾನ್ಯ ತಿಲಕ ಪಾದಂಗಳ ರವರಿಗೆ ವರ್ಗಾವಣೆಯಾಗಿಲ್ಲ. ಸರ್ವೆ ನಂ.186ರ ಸ್ವತ್ತು ಶ್ರೀ ರಘುತೀರ್ಥ ತಿಲಕ ಪಾದಂಗಳ ರವರ ವೈಯಕ್ತಿಕ ಆಸ್ತಿಯಾಗಿದೆ. ಅಧಿಕಾರ ಪತ್ರ ಪಡೆದ ಶ್ರೀ ಗುರುಮೂರ್ತಿ ಆಚಾರ್ಯ ರವರು ಅಧಿಕಾರ ಪತ್ರದಲ್ಲಿ ನಮೂದಿಸಿದ ಸರ್ವೆ ನಂ.186ರ ಆಸ್ತಿಯನ್ನು ದಿ:28/10/1988ರಂದು 6 ಎಕರೆ 37 ಗುಂಟೆ ಜಮೀನನ್ನು ಶ್ರೀ.ಕೊಲ್ಲೂರಯ್ಯ ಬಿನ್ ಸತ್ಯನಾರಾಯಣರಾವ್ ಹಾಗೂ ಶ್ರೀ.ಸದಾಶಿವಪ್ಪ ಬಿನ್ ಹೆಚ್.ಬಿ.ಮಲ್ಲಪ್ಪ ರವರಿಗೆ ಅಕ್ರಮವಾಗಿ ಮೃತರ ಖಾತೆಯಲ್ಲಿರುವ ಸ್ವತ್ತನ್ನು ಕ್ರಯದ ಮೂಲಕ ಮಾರಾಟ ಮಾಡಿದ್ದಾರೆ. ಅದರಂತೆ, ಜಂಟಿ ಖಾತೆಯಾಗಿ ವರ್ಗಾವಣೆಯಾಗಿದೆ. ಸದರಿ ಖಾತೆಯನ್ನು ಪ್ರಶ್ನಿಸಿ ಶ್ರೀ.ಶ್ರೀನಿವಾಸ ಮಲ್ಯ ಮತ್ತು ಶ್ರೀ.ಸುಬ್ಬರಾವ್ ರವರು ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರಕರಣ ಸಂಖ್ಯೆ:ಪಿಡಿಎ 27/89-90ರಂತೆ ಮೇಲ್ಮನವಿ ಸಲ್ಲಿಸಿದ್ದು, ದಿ:02/04/1990ರಂದು ತಹಶೀಲ್ದಾರ್‌ರವರ ಆದೇಶವನ್ನು ರದ್ದುಪಡಿಸಿ, ಭೂ ಕಂದಾಯ ಕಾಯಿದೆ, 1964 ಕಲಂ 127(4) ಮತ್ತು (43)ರಂತೆ ವಿಚಾರಣೆ ನಡೆಸಲು ಆದೇಶಿಸಿರುತ್ತಾರೆ. ಅದರಂತೆ, ಉಪ ತಹಶೀಲ್ದಾರ್, ನಾಡಾ ಕಛೇರಿ, ಅಗ್ರಹಾರ ಹೋಬಳಿ ರವರು ವಿಚಾರಣೆ ನಡೆಸಿ, ಭೂ ಸುಧಾರಣೆ ಕಾಯಿದೆ ಕಲಂ 79(9)ರಂತೆ ಅಧಿಕಾರ ಪತ್ರ ಪಡೆದ ಶ್ರೀ.ಗುರುಮೂರ್ತಿ ಆಚಾರ್ಯರವರಿಗೆ ಆ ಜಮೀನನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲವೆಂದು ಆದೇಶಿಸಿ, ಮುಂದಿನ ಕ್ರಮ ಕೈಗೊಳ್ಳಲು ಶಿವಮೊಗ್ಗ ಉಪವಿಭಾಗಾಧಿಕಾರಿಗಳಿಗೆ ಕಡತವನ್ನು ಮಂಡಿಸಿದ್ದಾರೆ. ಅದರಂತೆ, ಉಪವಿಭಾಗಾಧಿಕಾರಿಗಳು ಎಲ್‌ಆರ್‌ಎಫ್.ಸಿಆರ್.51/93-94ರಂತೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಮತ್ತು ದಾಖಲೆಗಳನ್ನು ಪರಾಮರ್ಶಿಸಿ, ದಿ:25/10/1996ರಂದು ಭೂ ಸುಧಾರಣೆ ಕಾಯಿದೆ ಕಲಂ 71(ಬ)ರಂತೆ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್‌ರವರಿಗೆ ಆದೇಶಿಸಿ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 71(ಎ) ಉಲ್ಲಂಘನೆ ವಿಚಾರದಲ್ಲಿ ಕಛೇರಿಯಿಂದ ಮಾಹಿತಿ ನೀಡುವವರಿಗೆ ಯಾವುದೇ ಕ್ರಮ ಕೈಗೊಳ್ಳದಂತೆ ಆದೇಶಿಸಿದ್ದಾರೆ. ಆ ಸಂದರ್ಭದಲ್ಲಿ ಶ್ರೀ.ಹೆಚ್.ಎಂ.ಸದಾಶಿವಪ್ಪ ಮತ್ತು ಶ್ರೀ.ಕೆ.ಎಸ್.ಕೊಲ್ಲೂರಯ್ಯ ರವರು ಉಪವಿಭಾಗಾಧಿಕಾರಿಗಳ ಸಹಿಯನ್ನು ನಕಲು ಮಾಡಿ, ನಕಲಿ ಆದೇಶ ಮಾಡಿದಂತೆ ಸೃಷ್ಟಿಸಿ, ಇವರಿಗೆ ಅನುಕೂಲಕ್ಕೆ ತಕ್ಕಂತೆ ಅಕ್ರಮವಾಗಿ ಕ್ರಯದ ಮೂಲಕ ವ್ಯವಹರಿಸಿ, ಸದರಿ ಆಸ್ತಿಯನ್ನು ಸಿಂಧುತ್ವ ಆಗಿದೆಯೆಂದು ಪ್ರಕರಣ ಮುಕ್ತಾಯಗೊಳಿಸಲಾಗಿದೆಯೆಂಬ ಆದೇಶವನ್ನು ಸೃಷ್ಟಿಸಿಕೊಂಡು ಆ ಆದೇಶದಂತೆ ತಮ್ಮ ಹೆಸರಿಗೆ ಕಂದಾಯ ದಾಖಲೆಗಳನ್ನು ನಮೂದಿಸಿದ್ದಾರೆ. ಈ ಬಗ್ಗೆ ದೂರುದಾರರು ಖಾಸತಿ

BD/2022/14

(222)

ಫಿರ್ಯಾಧು ಸಲ್ಲಿಸಿ, ಅದರಂತೆ ನ್ಯಾಯಾಲಯವು ತೀರ್ಥಹಳ್ಳಿ ಪೋಲೀಸರಿಗೆ ನಿರ್ದೇಶನ ನೀಡಿ, ತನಿಖೆ ಮಾಡಿ ವರದಿ ಸಲ್ಲಿಸುವಂತೆ ಆದೇಶಿಸಿದ್ದು, ತನಿಖಾಧಿಕಾರಿಗಳು ತನಿಖೆ ನಡೆಸಿ ವಂಚಿತ ವ್ಯಕ್ತಿಗಳ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದಾರೆ. ಸದರಿಯವರುಗಳು ಸರ್ವೆ ನಂ.186ರ 6 ಎಕರೆ 37 ಗುಂಟೆ ಆಸ್ತಿಯ ಪೈಕಿ 2 ಎಕರೆ 12 ಗುಂಟೆ ಜಮೀನನ್ನು ಶ್ರೀ.ಎಸ್.ಕೆ.ಧರ್ಮೇಶ್ ಬಿನ್ ಕೊಲ್ಲೂರಯ್ಯ ಗೌಡ ರವರಿಗೆ ಹಾಗು 2 ಎಕರೆ 20 ಗುಂಟೆ ಆಸ್ತಿಯನ್ನು ಶ್ರೀ.ಆರ್.ಎಂ.ಮಂಜುನಾಥ ಗೌಡ ಬಿನ್ ರಾಮಪ್ಪ ಗೌಡರವರಿಗೆ ಅಕ್ರಮವಾಗಿ ಮಾರಾಟ ಮಾಡಿದ್ದಾರೆ. ಸದರಿಯವರು ರಾಜಕೀಯವಾಗಿ ಬಲಾಢ್ಯರಾಗಿದ್ದು, ಸದರಿ ಸ್ವತ್ತಿನಲ್ಲಿ ಸರ್ಕಾರಿ ಶಾಲೆ, ಆಟದ ಮೈದಾನ, ನೀರಿನ ಟ್ಯಾಂಕ್ ಇದ್ದು, ಅವುಗಳನ್ನು ನೆಲಸಮ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಈ ಬಗ್ಗೆ ತಹಶೀಲ್ದಾರ್‌ರವರಿಗೆ ನಾಡಾ ಕಛೇರಿಯಿಂದ ಅಕ್ರಮ ಎಸಗಿರುವ ಸಂಪೂರ್ಣ ವಿವರಣೆ ನೀಡಿದ್ದು, ತೀರ್ಥಹಳ್ಳಿ ತಹಶೀಲ್ದಾರ್‌ರವರು ಪ್ರಕರಣ ಸಂಖ್ಯೆ:ಆರ್‌ಟಿ.ಸಿಆರ್.828/2011–12ರಂತೆ ದಾಖಲಿಸಿಕೊಂಡು ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಿದ್ದಾರೆ. ಶಿವಮೊಗ್ಗ ಜಿಲ್ಲಾಧಿಕಾರಿಗಳು ಸದರಿ ಪ್ರಕರಣವನ್ನು ಉಪವಿಭಾಗಾಧಿಕಾರಿಗಳಿಗೆ ವಹಿಸಿದ್ದು, ಸದರಿಯವರು ಸಂಪೂರ್ಣ ವಿವರವನ್ನು ಸಂಗ್ರಹಿಸಿ ದಿ:24/10/13ರಂದು ಕೋಣಂದೂರು ಗ್ರಾಮದ ಸರ್ವೆ ನಂ.186ರ ಜಮೀನನ್ನು ಸರ್ಕಾರದಲ್ಲಿ ನಿಹಿತಗೊಳಿಸಿ, ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲು ಆದೇಶಿಸಿದ್ದು, ಆ ಪ್ರದೇಶದಲ್ಲಿ ಯಾವುದೇ ಅಕ್ರಮ ಚಟುವಟಿಕೆ, ಕಟ್ಟಡಗಳನ್ನು ನಿರ್ಮಿಸಲು ನಿಷೇಧಿಸಲಾಗಿದೆ. ತಹಶೀಲ್ದಾರ್‌ರವರು ಪ್ರಕರಣ ಸಂಖ್ಯೆ:ಆರ್‌ಟಿ.ಸಿಆರ್.3/2013–14ರಂತೆ ದಾಖಲಿಸಿಕೊಂಡು ವಿಚಾರಣೆ ನಡೆಸಿ, ಅಕ್ರಮವಾಗಿ ಕ್ರಯದಾರರಾದ ಶ್ರೀ.ಎಸ್.ಆರ್.ಕೊಲ್ಲೂರಯ್ಯ ಗೌಡ ಎಂಬುವವರ ಹೆಸರಿಗೆ ಉಪವಿಭಾಗಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ, ದಿ:11/03/14ರಂತೆ ಖಾತಾ ವರ್ಗಾಯಿಸಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸುವಂತೆ, ಶಿವಮೊಗ್ಗ ಜಿಲ್ಲೆಯ ಆರಕ್ಷಕ ಅಧೀಕ್ಷಕ (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರಿಗೆ ಆದೇಶಿಸಿದ್ದು, ಸದರಿಯವರು ತಮ್ಮ ವರದಿಯ ಜೊತೆಗೆ ದೋಷಾರೋಪಣ ಪತ್ರದ ಪ್ರತಿಯನ್ನು ಸಲ್ಲಿಸಿದ್ದು, ಅದರಲ್ಲಿ ಶ್ರೀ.ಸದಾಶಿವಪ್ಪ, ಶ್ರೀ.ಕೆ.ಎಸ್.ಕೊಲ್ಲೂರಯ್ಯ ಮತ್ತು ನಿವೃತ್ತ ತಹಶೀಲ್ದಾರ್ ಶ್ರೀ.ಬಿ.ಆರ್.ಪಾಟೀಲ್ ರವರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 465, 468, 471, 420 ಸಹ ಕಲಂ 34ರಡಿ ದೋಷಾರೋಪಣ ಪಟ್ಟಿ ಸಲ್ಲಿಸಿರುವ ಬಗ್ಗೆ ವರದಿ ನೀಡಿದ್ದಾರೆ. ತನಿಖಾಧಿಕಾರಿಗಳ ವರದಿಯನ್ವಯ 3ನೇ ಎದುರುದಾರರಾದ ಶ್ರೀ.ಆರ್.ಬಿ.ಪಾಟೀಲ್ ರವರ ಹೆಸರನ್ನು ಮುಖಪುಟದಲ್ಲಿ ಸೇರಿಸಿ, ಸದರಿ ಶ್ರೀ.ಸದಾಶಿವಪ್ಪ ಮತ್ತು ಶ್ರೀ.ಕೆ.ಎಸ್.ಕೊಲ್ಲೂರಯ್ಯ ರವರು ಖಾಸಗಿ ವ್ಯಕ್ತಿಗಳಾದ್ದರಿಂದ, ಸದರಿಯವರನ್ನು ಎದುರುದಾರರನ್ನಾಗಿ ಸೇರಿಸಿಲ್ಲ.

223



4. ದೂರಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಕೋಣಂದೂರು ಗ್ರಾಮದ ಸರ್ವೆ ನಂ.186ರಲ್ಲಿ 6.37 ಎಕರೆ ಜಮೀನನ್ನು ಖಾತಾದಾರರುಗಳಾದ ಶ್ರೀ.ಕೊಲ್ಲೂರಯ್ಯ ಬಿನ್ ಸತ್ಯನಾರಾಯಣ ರಾವ್ ಹಾಗೂ ಶ್ರೀ.ಸದಾಶಿವಪ್ಪ ಬಿನ್ ಮಲ್ಲಪ್ಪ ರವರು ದಿ:28/10/1988ರಲ್ಲಿ ಕ್ರಯಕ್ಕೆ ಪಡೆದು ಖಾತೆ ಮಾಡಿಸಿಕೊಂಡಿದ್ದಾರೆ. ಈ ಬಗ್ಗೆ ಮೇಲ್ಮನವಿ ದಾಖಲಾಗಿ ಶಿವಮೊಗ್ಗ ಉಪವಿಭಾಗಾಧಿಕಾರಿಗಳು ಎಲ್‌ಆರ್‌ಎಫ್.ಸಿಆರ್.51/93–94ರ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿ ದಿ:25/10/1996ರಲ್ಲಿ ಆದೇಶ ನೀಡಿರುವುದನ್ನು ಖಾತಾದಾರರು ನಕಲು ಆದೇಶ ಸೃಷ್ಟಿಸಿ, ತಮ್ಮ ಹೆಸರಿಗೆ ಖಾತಾ ಮಾಡಿಸಿಕೊಂಡಿರುವುದು, ಆ ನಂತರ ಸದರಿ 6 ಎಕರೆ 37 ಗುಂಟೆ ಜಮೀನಿನ ಪೈಕಿ 2 ಎಕರೆ 12 ಗುಂಟೆ ಜಮೀನನ್ನು ಶ್ರೀ.ಎಸ್.ಕೆ.ಧರ್ಮೇಶ್ ಬಿನ್ ಕೊಲ್ಲೂರಯ್ಯ ಗೌಡ ರವರಿಗೆ ಹಾಗೂ 2 ಎಕರೆ 20 ಗುಂಟೆ ಜಮೀನನ್ನು ಶ್ರೀ.ಆರ್.ಎಂ.ಮಂಜುನಾಥಗೌಡ ಬಿನ್ ರಾಮಪ್ಪಗೌಡರವರಿಗೆ ಮಾರಾಟ ಮಾಡಿದ್ದು, 2010ನೇ ವರ್ಷವೆಂದು ಖಾತೆ ಮುಂದುವರೆದಿದೆ. ಸದರಿ ಜಮೀನಿನಲ್ಲಿ 1 ಎಕರೆ 21 ಗುಂಟೆ ಜಮೀನನ್ನು ಶ್ರೀ.ಎಸ್.ಆರ್.ಕೊಲ್ಲೂರಯ್ಯ ಗೌಡ ರವರು 2013–14ನೇ ಸಾಲಿನಲ್ಲಿ ದಿ:09/10/13ರ ಕ್ರಯಕ್ಕೆ ಪಡೆದಂತೆ ಹಾಗೂ ಅದೇ ಸರ್ವೆ ನಂಬರಿನ 2 ಎಕರೆ 11 ಗುಂಟೆ ಖುಷ್ಕಿ ಜಮೀನನ್ನು ಶ್ರೀಮತಿ.ವಿಶಾಲಮ್ಮ ಕೋಂ ಎಸ್.ಆರ್.ಕೊಲ್ಲೂರಯ್ಯ ಗೌಡ ರವರು ದಾನಪತ್ರದಂತೆ ಪಡೆದಿದ್ದು, ಈ ಜಮೀನುಗಳ ಖಾತೆಯನ್ನು ಬದಲಾಯಿಸುವ ಬಗ್ಗೆ ಕ್ರಮ ವಹಿಸಿದ ಬಗ್ಗೆ ರಾಜಸ್ವ ನಿರೀಕ್ಷಕರಿಗೆ ತಕರಾರು ಬಂದಿದ್ದು, ಪುನಃ ತಾಲ್ಲೂಕ್ ಕಛೇರಿಗೆ ಕಡತವನ್ನು ಮರು ಸಲ್ಲಿಸಿದ್ದಾರೆ. ಅದರಂತೆ, ವಿಚಾರಣೆ ನಡೆಸಿದ್ದು ಮಾನ್ಯ ಸತ್ರ ನ್ಯಾಯಾಲಯ, ತೀರ್ಥಹಳ್ಳಿರವರ ಆದೇಶಕ್ಕೆ ಬದ್ಧರಾಗಿರುವಂತೆ ಖಾತಾ ಬದಲಾಯಿಸಲು ಆದೇಶಿಸಿರುವುದಾಗಿ, ಇದರಲ್ಲಿ ತಮ್ಮದು ಯಾವುದೇ ಕರ್ತವ್ಯ ಲೋಪವಿಲ್ಲವೆಂದು ಹೇಳಿದ್ದಾರೆ.

5. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿವಮೊಗ್ಗ ಉಪವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರಕರಣ ಸಂಖ್ಯೆ: ಎಲ್‌ಆರ್‌ಎಫ್. ಸಿಆರ್.51/93–94ರಲ್ಲಿ ಪ್ರಕರಣದ ವಿಚಾರಣೆ ತೆಗೆದುಕೊಂಡಾಗ ತೀರ್ಥಹಳ್ಳಿ ತಹಶೀಲ್ದಾರ್‌ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಸದರಿ ಜಮೀನನ್ನು ಕೆಲವರು ಕಬಳಿಸಲು ಹೊಂಚು ಹಾಕುತ್ತಿದ್ದು, ಆ ಆಸ್ತಿಯನ್ನು ಪ್ರಥಮವಾಗಿ ಸರ್ಕಾರಕ್ಕೆ ನಿಹಿತಗೊಳಿಸಿಕೊಂಡು ಸದರಿ ಜಮೀನಿಗೆ ಬೇಲಿ ಹಾಕಿ ರಕ್ಷಣೆ ನೀಡಲು ಸಂಬಂಧಿಸಿದ ರಾಜಸ್ವ ನಿರೀಕ್ಷಕರಿಗೆ ಆದೇಶಿಸುವಂತೆ ಕೋರಿರುತ್ತಾರೆ ಹಾಗೂ ಅಕ್ರಮ ದಾಖಲೆಗಳನ್ನು ರದ್ದುಪಡಿಸುವ ಸಂಬಂಧ ಕೋರಲಾಗಿದೆ. ದಿನಾಂಕ:24/10/13ರಂದು ಆದೇಶ ಹೊರಡಿಸಿ ಸದರಿ ಜಮೀನನ್ನು ಸರ್ಕಾರಕ್ಕೆ ನಿಹಿತಗೊಳಿಸಿಕೊಂಡು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲು ಆದೇಶಿಸಲಾಗಿದೆ ಹಾಗೂ ಯಾವುದೇ ಅಕ್ರಮ ಚಟುವಟಿಕೆ ಹಾಗೂ ಕಟ್ಟಡಗಳನ್ನು ಕಟ್ಟದಂತೆ ನಿಷೇದಿಸಲಾಗಿದೆ. ಸದರಿ ಜಮೀನಿನ ಬಗ್ಗೆ ಪ್ರತಿವಾದಿಗಳ ಪರ ವಕೀಲರು ತೀರ್ಥಹಳ್ಳಿ ಜೆಎಂಎಫ್‌ಸಿ

BD/2022/14
(22A)

ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವುದರಿಂದ, ದಿನಾಂಕ: 24/10/13ರಂದು ಮಾಡಿರುವ ಆದೇಶ ಸರಿಯಿಲ್ಲವೆಂದು ತಿಳಿಸಿದ್ದು, ಅಲ್ಲದೇ ಜಿಲ್ಲಾಧಿಕಾರಿಗಳು, ಶಿವಮೊಗ್ಗ ರವರು ದಿನಾಂಕ:20/10/1997ರಂದು ಹೊರಡಿಸಿರುವ ಆದೇಶವನ್ನು ಸಹ ಹಾಜರುಪಡಿಸಿ, ದಿ:24/10/13ರಂದು ಹೊರಡಿಸಿರುವ ಆದೇಶವನ್ನು ತಡೆಹಿಡಿಯಬೇಕೆಂದು ಕೋರಿದ್ದರ ಮೇರೆಗೆ ದಿ:26/10/13ರಂದು ಮಧ್ಯಂತರ ಆದೇಶ ಹೊರಡಿಸಿ, ದಿ:24/10/13ರಂದು ಹೊರಡಿಸಿದ ಆದೇಶವನ್ನು ಜಾರಿಗೆ ನೀಡದೇ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ತೀರ್ಥಹಳ್ಳಿ ತಹಶೀಲ್ದಾರ್‌ರವರಿಗೆ ಸೂಚಿಸಿರುವುದಾಗಿ, ಇದರಲ್ಲಿ ತನ್ನದು ಯಾವುದೇ ಕರ್ತವ್ಯ ಲೋಪ ಇಲ್ಲವೆಂದು ಹೇಳಿದ್ದಾರೆ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಪಿಡಿಎ 27/89–90 ದಿ:02/04/1990ರಂದು ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್‌ರವರ ಆದೇಶವನ್ನು ರದ್ದುಗೊಳಿಸಿ ಭೂ ಕಂದಾಯ ಅಧಿನಿಯಮದ ಅಡಿ ಮನರ್ ವಿಚಾರಣೆಗೆ ಆದೇಶಿಸಿರುವುದು ಮತ್ತು ಅದರಂತೆ, ಉಪತಹಶೀಲ್ದಾರ್ ರವರು ವಿಚಾರಣೆ ನಡೆಸಿ ಪುನಃ ವಿಭಾಗಾಧಿಕಾರಿಗಳಿಗೆ ಕಾನೂನು ರೀತಿ ಕ್ರಮ ಜರುಗಿಸುವ ಸಲುವಾಗಿ ಕಡತ ಸಲ್ಲಿಸಿದ್ದು, ಅದರಂತೆ ಉಪವಿಭಾಗಾಧಿಕಾರಿಗಳು ಎಲ್‌ಆರ್‌ಎಫ್.ಸಿಆರ್.51/93–94ರಂತೆ ಪ್ರಕರಣ ದಾಖಲಿಸಿ ಸದರಿ ಪ್ರಕರಣದಲ್ಲಿ ಭೂ ಸುಧಾರಣಾ ಕಾಯಿದೆ, ಕಲಂ 79(ಬಿ) ಅನ್ವಯ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಉಪ ತಹಶೀಲ್ದಾರ್‌ರವರಿಗೆ ಸೂಚಿಸಿ, ಕಲಂ 79(ಎ) ಉಲ್ಲಂಘನೆ ವಿಚಾರದಲ್ಲಿ ತಾವು ಮಾಹಿತಿ ನೀಡುವವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರಲು ಉಪ ತಹಶೀಲ್ದಾರ್ ನಾಡಾ ಕಛೇರಿ ರವರಿಗೆ ದಿ:25/10/1996ರಂದು ಆದೇಶಿಸಿದ್ದಾರೆ. ಆ ನಂತರ, ಶ್ರೀ.ಹೆಚ್.ಎಂ.ಸದಾಶಿವಪ್ಪ ಮತ್ತು ಶ್ರೀ.ಕೆ.ಎಸ್.ಕೊಲ್ಲೂರಯ್ಯ ರವರು ಉಪವಿಭಾಗಾಧಿಕಾರಿಗಳ ಸಹಿಯನ್ನು ನಕಲು ಮಾಡಿ, ನಕಲಿ ಆದೇಶ ಸೃಷ್ಟಿಸಿ, ಅಕ್ರಮವಾಗಿ ಕ್ರಯದ ಮೂಲಕ ವ್ಯವಹರಿಸಿ, ಆ ಆಸ್ತಿಯನ್ನು ಸಿಂಧುತ್ವ ಆಗಿದೆಯೆಂದು ಪ್ರಕರಣ ಮುಕ್ತಾಯಗೊಳಿಸಲಾಗಿದೆಯೆಂದು ಆದೇಶವನ್ನು ಸೃಷ್ಟಿಸಿದ್ದಾರೆ. ಈ ಬಗ್ಗೆ ಸದರಿಯವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ತೀರ್ಥಹಳ್ಳಿ ನ್ಯಾಯಾಲಯದಿಂದ ಸಮನ್ಸ್ ಬಂದಿದೆ. ಇದರಲ್ಲಿ ತನ್ನದು ಯಾವುದೇ ಪಾತ್ರ ಇಲ್ಲ. ಉಪವಿಭಾಗಾಧಿಕಾರಿಗಳ ಕಛೇರಿಯ ದಾಖಲೆಯೆಂದು ಹೇಳಲ್ಪಟ್ಟ ಸೃಷ್ಟಿತ ದಾಖಲೆಯನ್ನು ಪರಿಶೀಲಿಸಿದ್ದು, ಅದರಲ್ಲಿ ಎದುರುದಾರರ ಸಹಿ ಮತ್ತು ಅಂದಿನ ನಕಲು ನೀಡುವ ಶಾಖೆಯ ವಿಷಯ ನಿರ್ವಾಹಕ ಶ್ರೀ.ಯು.ಕೃಷ್ಣನ್ ರವರ ಸಹಿಗಳನ್ನು ಹೋಲುವ ಸಹಿಗಳು ಕಂಡು ಬರುತ್ತಿದ್ದು, ಸದರಿ ಸಹಿಗಳನ್ನು ಸೃಷ್ಟಿಸಲ್ಪಟ್ಟಿದೆ ಎಂಬುದನ್ನು ದಾಖಲೆಯನ್ನು ಖುದ್ದಾಗಿ ಪರಿಶೀಲಿಸಿದಲ್ಲಿ ಮಾತ್ರ ಹೇಳಬಹುದಾಗಿದೆ. ಆದರೆ, ಆ ದಾಖಲೆಯನ್ನು ಪರಿಶೀಲಿಸಲು ಅವಕಾಶ ನೀಡಿಲ್ಲ. ಈ ಬಗ್ಗೆ ಎದುರುದಾರರು ತಮ್ಮ ಕಛೇರಿಯಿಂದ ತಿಳುವಳಿಕೆ ಬಂದ ನಂತರ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲಿಸಿದ್ದು, ಸದರಿಯವರು ದಿ:25/10/1996ರಂದು ಆದೇಶ ಮಾಡಿದ್ದು, ಸದರಿ ಆದೇಶದ ಪ್ರತಿಯನ್ನು ಕೂಡಲೇ

ಉಪವಿಭಾಗಾಧಿಕಾರಿಗಳೇ ಸಹಿ ಮಾಡಿ ಎದುರುದಾರರ ಮೂಲಕ ದಿ:30/11/1996ರಂದು ಅಂದಿನ ನಾಡಾ ಕಛೇರಿಯ ಉಪ ತಹಶೀಲ್ದಾರ್‌ರವರಿಗೆ ರವಾನಿಸಿದ್ದು, ಸದರಿ ಉಪವಿಭಾಗಾಧಿಕಾರಿಗಳು ಆದೇಶ ಮಾಡುವಾಗ ತಮ್ಮ ಆದೇಶದಲ್ಲಿ ಭೂ ಸುಧಾರಣಾ ಕಾಯಿದೆ ಕಲಂ 79(ಬಿ) ಅನುಸರಿಸಿ, ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ತಹಶೀಲ್ದಾರ್‌ರವರಿಗೆ ಸೂಚಿಸುತ್ತಾ ಕಲಂ 79(ಎ) ಉಲ್ಲಂಘನೆ ವಿಚಾರದಲ್ಲಿ ಮಾಹಿತಿ ನೀಡುವವರೆಗೂ ಯಾವುದೇ ರೀತಿ ಕ್ರಮ ಕೈಗೊಳ್ಳದೇ ಇರಲು ನಾಡಾ ಕಛೇರಿಯ ಉಪ ತಹಶೀಲ್ದಾರ್‌ರವರಿಗೆ ದಿ:25/10/1996ರಂದು ನಿರ್ದೇಶನ ನೀಡಿ ಪ್ರಕರಣ ಮುಕ್ತಾಯಗೊಳಿಸಿದ್ದಾರೆ. ಉಪ ತಹಶೀಲ್ದಾರ್‌ರವರು ಉಪವಿಭಾಗಾಧಿಕಾರಿಗಳ ನಿರ್ದೇಶನದಂತೆ ಕ್ರಮವಹಿಸುವ ಬದಲು ಈ ಬಗ್ಗೆ ಖಾತೆ ಮಾಡಲು ಸಲ್ಲಿಸಿದ ಅರ್ಜಿದಾರರೊಂದಿಗೆ ಷಾಮೀಲಾಗಿ ಖಾತಾ ಮಾಡಿರುವುದು ಕಂಡು ಬಂದಿದೆ. ಉಪ ತಹಶೀಲ್ದಾರ್‌ರವರೇ ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕಾಗಿದೆ. ಆದರೆ, ಯಾವುದೋ ಸೃಷ್ಟಿತ ದಾಖಲೆಯೆಂಬ ದಾಖಲೆಯ ಮೇರೆಗೆ ಖಾತಾ ಬದಲಾವಣೆ ಮಾಡಿದಲ್ಲಿ ಅದಕ್ಕೆ ಅಂದಿನ ಉಪ ತಹಶೀಲ್ದಾರ್‌ರವರೇ ನೇರ ಹೊಣೆಗಾರರಾಗಿದ್ದಾರೆ. ಇದರಲ್ಲಿ ತಮ್ಮದು ಯಾವುದೇ ಪಾತ್ರ ಇರುವುದಿಲ್ಲವೆಂದು ಹೇಳಿದ್ದಾರೆ.

7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿನ ಅಂಶಗಳನ್ನು ಅಲ್ಲಗಳೆದು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

8. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

3ನೇ ಎದುರುದಾರರು ದಾಖಲೆಗಳನ್ನು ಮತ್ತು ಉಪವಿಭಾಗಾಧಿಕಾರಿಗಳ ಆದೇಶವನ್ನು ಸೃಷ್ಟಿಸಿದ ಕಾರಣ ತೀರ್ಥಹಳ್ಳಿ ಪೊಲೀಸರು ವಂಚನೆ ಹಾಗೂ ಸೃಷ್ಟಿತ ದಾಖಲೆಗಳ ಬಗ್ಗೆ ಉಪವಿಭಾಗಾಧಿಕಾರಿಗಳ ಕಛೇರಿಯಿಂದ ಆದೇಶದ ಅಸಲು ಪ್ರತಿಯನ್ನು ತರಿಸಿ, ತಾನು ಸಲ್ಲಿಸಿದ ನಕಲು ಆದೇಶದ ಪ್ರತಿಯ ಅಕ್ರಮ ಲಾಭ ಪಡೆಯುವ ಸಂಬಂಧ ಮ್ಯುಟೇಷನ್ ದಾಖಲೆ ಮಾಡಿಕೊಂಡಿರುವ ಅಂಶ ಎಲ್ಲಾ ದಾಖಲೆ ಮತ್ತು ಸಾಕ್ಷ್ಯಾಧಾರಗಳಿಂದ ಪೊಲೀಸರು ಶ್ರೀ.ಕೆ.ಎಸ್.ಕೊಲ್ಲೂರಯ್ಯ, ಶ್ರೀ.ಸದಾಶಿವಪ್ಪ ಮತ್ತು 3ನೇ ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದಾರೆ. ಅದರ ವಿರುದ್ಧ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದೂರನ್ನು ವಜಾಗೊಳಿಸುವಂತೆ ರಿಟ್ ಅರ್ಜಿ ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ಸಹ ವಜಾಗೊಂಡಿದೆ. ಈ ರೀತಿ ದಾಖಲೆ ಸೃಷ್ಟಿಸಲು 3ನೇ ಎದುರುದಾರರು ಸಹ ಷಾಮೀಲಾಗಿರುತ್ತಾರೆ. 2ನೇ ಎದುರುದಾರರು ಸದರಿ ಆಸ್ತಿಗೆ ಸಂಬಂಧಪಟ್ಟಂತೆ, ತಾನು ಬರೆದ ಆದೇಶಕ್ಕೆ ತಾವುಗಳೇ ಯಾವುದೇ ಪ್ರಚೋದನೆಗೊಳಗಾಗಿ ದಿ:24/10/13ರಂದು ನೀಡಿದ ಆದೇಶಕ್ಕೆ ವಕೀಲರು ಸರಿಯಿಲ್ಲವೆಂದು ತಿಳಿಸಿದ

BD/2022/14

226

ಕಾರಣ ತಡೆಯಾಜ್ಞೆಯನ್ನು ಹೊರತುಪಡಿಸಿ, ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿರುತ್ತಾರೆ. ಇದು ಸಹ 2ನೇ ಎದುರುದಾರರ ಕರ್ತವ್ಯ ಲೋಪ ಆಗಿದೆ. 3ನೇ ಎದುರುದಾರರ ಪತಿ ಶ್ರೀ.ಎಸ್.ಕೆ.ಧರ್ಮೇಶ್ ರವರು ಸದರಿ ಆಸ್ತಿಯನ್ನು ಶ್ರೀ.ಹೆಚ್.ಎಂ.ಸದಾಶಿವಪ್ಪ ಮತ್ತು ಶ್ರೀ.ಕೊಲ್ಲೂರಯ್ಯ ರವರಿಂದ ಪಡೆದು ತಮ್ಮ ಪತಿಗೆ ಸಹಾಯ ಮಾಡಲು ಸರ್ವೆ ನಕ್ಷೆ ತಯಾರಿಸಿ, ದಾಖಲೆಗಳನ್ನು ಸೃಷ್ಟಿಸಿದ್ದಾರೆ. 1ನೇ ಎದುರುದಾರರು ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ತಮ್ಮ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 4ನೇ ಎದುರುದಾರರ ಪತಿಗೆ ಸಹಾಯ ಮಾಡಲು ಇವರೊಂದಿಗೆ ಷಾಮೀಲಾಗಿ ಸದರಿ ಸ್ವತ್ತಿನ ಖಾತೆಯನ್ನು ವರ್ಗಾಯಿಸಿ ಕರ್ತವ್ಯ ಲೋಪ ಎಸಗಿರುವುದಾಗಿ ಹೇಳಿದ್ದಾರೆ.

9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಆಸ್ತಿ ಮೂಲತಃ ಶ್ರೀ ಬೀಮಸೇತು ಮುನಿವೃಂದ ಮಠ, ಬೀಮನಕಟ್ಟೆಯ ಮಠಾಧಿಪತಿಗಳಾದ ಶ್ರೀ ರಘುತೀರ್ಥ ಪಾದಂಗಳ ಕ್ರಯಕ್ಕೆ ಪಡೆದ ಆಸ್ತಿಯಾಗಿದೆ. 1977ರ ಮೇ ಇಸವಿಯಲ್ಲಿ ಶ್ರೀ ರಘುತೀರ್ಥ ಪಾದಂಗಳ ರವರು ಮರಣ ಹೊಂದಿದ್ದು, ನಂತರ ಶ್ರೀ ಬೀಮಸೇತು ಮುನಿವೃಂದ ಮಠದ ಉತ್ತರಾಧಿಕಾರಿಗಳಾಗಿ ಶ್ರೀರಘುಮಾನ್ಯ ತಿಲಕ ಪಾದಂಗಳ ರವರು ಆಗಿದ್ದಾರೆ. ಸದರಿಯವರು ದಿ:07/10/1980ರಲ್ಲಿ ಶ್ರೀ ಗುರುಮೂರ್ತಿ ಆಚಾರ್ಯ ಎಂಬುವವರಿಗೆ ನೋಂದಾಯಿತ ಅಧಿಕಾರ ಪತ್ರ ಮಾಡಿಕೊಟ್ಟಿದ್ದು, ಸದರಿ ಅಧಿಕಾರ ಪತ್ರದಲ್ಲಿ ಹೇಳಲಾದ ಮಠದ ಎಲ್ಲಾ ಜಮೀನುಗಳನ್ನು ನಿರ್ವಹಿಸಿಕೊಂಡು ಹೋಗಲು ಅಧಿಕಾರ ನೀಡಲಾಗಿದೆ. ಆದರೆ, ಸದರಿ ಗ್ರಾಮದ ಸರ್ವೆ ನಂ.186ರ ಬಗ್ಗೆ ಕಾರ್ಯನಿರ್ವಹಿಸುವಂತೆ ಅಧಿಕಾರ ಪತ್ರದಲ್ಲಿ ತಿಳಿಸಿಲ್ಲ. ಅಧಿಕಾರ ಪತ್ರ ಪಡೆದ ಶ್ರೀ ಗುರುಮೂರ್ತಿ ಆಚಾರ್ಯ ರವರು ಅಧಿಕಾರ ಪತ್ರದಲ್ಲಿ ನಮೂದಿಸಿದ ಸರ್ವೆ ನಂ.186ರ ಆಸ್ತಿಯನ್ನು ದಿ:28/10/1988ರಂದು 6 ಎಕರೆ 37 ಗುಂಟೆ ಜಮೀನನ್ನು ಶ್ರೀ.ಕೊಲ್ಲೂರಯ್ಯ ಬಿನ್ ಸತ್ಯನಾರಾಯಣರಾವ್ ಹಾಗೂ ಶ್ರೀ.ಸದಾಶಿವಪ್ಪ ಬಿನ್ ಹೆಚ್.ಬಿ.ಮಲ್ಲಪ್ಪ ರವರಿಗೆ ಅಕ್ರಮವಾಗಿ ಮೃತರ ಖಾತೆಯಲ್ಲಿರುವ ಸ್ವತ್ತನ್ನು ಕ್ರಯದ ಮೂಲಕ ಮಾರಾಟ ಮಾಡಿದ್ದಾರೆ. ಅದರಂತೆ, ಜಂಟಿ ಖಾತೆಯಾಗಿ ವರ್ಗಾವಣೆಯಾಗಿದೆ. ಈ ಬಗ್ಗೆ ಸದರಿ ಖಾತೆಯನ್ನು ಪ್ರಶ್ನಿಸಿ ಶ್ರೀ.ಶ್ರೀನಿವಾಸ ಮಲ್ಯ ಮತ್ತು ಶ್ರೀ.ಸುಬ್ಬರಾವ್ ರವರು ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರಕರಣ ಸಂಖ್ಯೆ:ಪಿಡಿಎ 27/89–90ರಂತೆ ಮೇಲ್ಮನವಿ ಸಲ್ಲಿಸಿದ್ದು, ದಿ:02/04/1990ರಂದು ತಹಶೀಲ್ದಾರ್‌ರವರ ಆದೇಶವನ್ನು ರದ್ದುಪಡಿಸಿ, ಭೂ ಕಂದಾಯ ಕಾಯಿದೆ, 1964 ಕಲಂ 127(4) ಮತ್ತು (43)ರಂತೆ ವಿಚಾರಣೆ ನಡೆಸಲು ಆದೇಶಿಸಿದ್ದಾರೆ. ಅದರಂತೆ, ಉಪ ತಹಶೀಲ್ದಾರ್, ನಾಡಾ ಕಛೇರಿ, ಅಗ್ರಹಾರ ಹೋಬಳಿ ರವರು ವಿಚಾರಣೆ ನಡೆಸಿ, ಭೂ ಸುಧಾರಣೆ ಕಾಯಿದೆ ಕಲಂ 79(9)ರಂತೆ ಅಧಿಕಾರ ಪತ್ರ ಪಡೆದ ಶ್ರೀ.ಗುರುಮೂರ್ತಿ ಆಚಾರ್ಯರವರಿಗೆ ಆ ಜಮೀನನ್ನು ಮಾರಾಟ ಮಾಡುವ ಹಕ್ಕು ಇಲ್ಲವೆಂದು ಆದೇಶಿಸಿ, ಮುಂದಿನ ಕ್ರಮ ಕೈಗೊಳ್ಳಲು ಶಿವಮೊಗ್ಗ ಉಪವಿಭಾಗಾಧಿಕಾರಿಗಳಿಗೆ ಕಡತವನ್ನು ಮಂಡಿಸಿದ್ದಾರೆ. ಅದರಂತೆ, ಉಪವಿಭಾಗಾಧಿಕಾರಿಗಳು

227

ಎಲ್ಆರ್ಎಫ್.ಸಿಆರ್.51/93-94ರಂತೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಮತ್ತು ದಾಖಲೆಗಳನ್ನು ಪರಾಮರ್ಶಿಸಿ, ದಿ:25/10/1996ರಂದು ಭೂ ಸುಧಾರಣೆ ಕಾಯಿದೆ ಕಲಂ 79(ಬ)ರಂತೆ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್‌ರವರಿಗೆ ಆದೇಶಿಸಿ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 79(ಎ) ಉಲ್ಲಂಘನೆ ವಿಚಾರದಲ್ಲಿ ಕಛೇರಿಯಿಂದ ಮಾಹಿತಿ ನೀಡುವವರಿಗೆ ಯಾವುದೇ ಕ್ರಮ ಕೈಗೊಳ್ಳದಂತೆ ಆದೇಶಿಸಿದ್ದಾರೆ. ಈ ರೀತಿ ಸದರಿ ಜಮೀನನ್ನು ಮಾರಾಟ ಮಾಡುವ ಅಧಿಕಾರವಿಲ್ಲದ ವ್ಯಕ್ತಿಯಿಂದ ಆದ ಕ್ರಯ ಕಾನೂನುಬದ್ಧವಾಗಿಲ್ಲ, ಆ ಕಾರಣ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 79(ಬ) ಉಲ್ಲಂಘನೆಯಾಗಿದೆ ಎಂಬುದಾಗಿ ಆದೇಶಿಸಿ, ಆ ನಂತರ ಯಾವುದೇ ಕ್ರಮ ಕೈಗೊಳ್ಳದಂತೆ ಆದೇಶಿಸಿರುವುದು 2ನೇ ಎದುರುದಾರರ ಕರ್ತವ್ಯ ಲೋಪವಾಗಿದೆ. ಆ ನಂತರ, ಸದರಿಯವರುಗಳು ಸರ್ವೆ ನಂ.186ರ 6 ಎಕರೆ 37 ಗುಂಟೆ ಆಸ್ತಿಯ ಪೈಕಿ 2 ಎಕರೆ 12 ಗುಂಟೆ ಜಮೀನನ್ನು ಶ್ರೀ.ಎಸ್.ಕೆ.ಧರ್ಮೇಶ್ ಬಿನ್ ಕೊಲ್ಲೂರಯ್ಯ ಗೌಡ ರವರಿಗೆ ಹಾಗು 2 ಎಕರೆ 20 ಗುಂಟೆ ಆಸ್ತಿಯನ್ನು ಶ್ರೀ.ಆರ್.ಎಂ.ಮಂಜುನಾಥ ಗೌಡ ಬಿನ್ ರಾಮಪ್ಪ ಗೌಡರವರಿಗೆ ಅಕ್ರಮವಾಗಿ ಮಾರಾಟ ಮಾಡಿದ್ದಾರೆ. ಸದರಿ ಸ್ವತ್ತಿನಲ್ಲಿ ಸರ್ಕಾರಿ ಶಾಲೆ, ಆಟದ ಮೈದಾನ, ನೀರಿನ ಟ್ಯಾಂಕ್ ಇದ್ದು, ಅವುಗಳನ್ನು ನೆಲಸಮ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಈ ಬಗ್ಗೆ ತಹಶೀಲ್ದಾರ್‌ರವರಿಗೆ ನಾಡಾ ಕಛೇರಿಯಿಂದ ಅಕ್ರಮ ಎಸಗಿರುವ ಬಗ್ಗೆ ಸಂಪೂರ್ಣ ವಿವರಣೆ ನೀಡಿದ್ದು, ತೀರ್ಥಹಳ್ಳಿ ತಹಶೀಲ್ದಾರ್‌ರವರು ಪ್ರಕರಣ ಸಂಖ್ಯೆ:ಆರ್‌ಟಿ.ಸಿಆರ್.828/2011-12ರಂತೆ ದಾಖಲಿಸಿಕೊಂಡು ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಿದ್ದಾರೆ. ಶಿವಮೊಗ್ಗ ಜಿಲ್ಲಾಧಿಕಾರಿಗಳು ಸದರಿ ಪ್ರಕರಣವನ್ನು ಉಪವಿಭಾಗಾಧಿಕಾರಿಗಳಿಗೆ ವಹಿಸಿದ್ದು, ಸದರಿಯವರು ಸಂಪೂರ್ಣ ವಿವರವನ್ನು ಸಂಗ್ರಹಿಸಿ ದಿ:24/10/13ರಂದು ಕೋಣಂದೂರು ಗ್ರಾಮದ ಸರ್ವೆ ನಂ.186ರ ಜಮೀನನ್ನು ಸರ್ಕಾರದಲ್ಲಿ ನಿಹಿತಗೊಳಿಸಿ, ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲು ಆದೇಶಿಸಿದ್ದು, ಆ ಪ್ರದೇಶದಲ್ಲಿ ಯಾವುದೇ ಅಕ್ರಮ ಚಟುವಟಿಕೆ, ಕಟ್ಟಡಗಳನ್ನು ನಿರ್ಮಿಸಲು ನಿಷೇದಿಸಲಾಗಿದೆ. ತಹಶೀಲ್ದಾರ್‌ರವರು ಪ್ರಕರಣ ಸಂಖ್ಯೆ:ಆರ್‌ಟಿ.ಸಿಆರ್.3/2013-14ರಂತೆ ದಾಖಲಿಸಿಕೊಂಡು ವಿಚಾರಣೆ ನಡೆಸಿ, ಅಕ್ರಮವಾಗಿ ಕ್ರಯದಾರರಾದ ಶ್ರೀ.ಎಸ್.ಆರ್.ಕೊಲ್ಲೂರಯ್ಯ ಗೌಡ ಎಂಬುವವರ ಹೆಸರಿಗೆ ಉಪವಿಭಾಗಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ, ದಿ:11/03/14ರಂತೆ ಖಾತಾ ವರ್ಗಾಯಿಸಿದ್ದಾರೆ. ಆದರೆ, ಈ ರೀತಿ ಉಪವಿಭಾಗಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಖಾತೆ ಬದಲಾವಣೆ ಮಾಡಿರುವುದು ಎದುರುದಾರರ ಕರ್ತವ್ಯ ಲೋಪವಾಗಿದೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಮಾಡಿದ ಆದೇಶ ಚಾಲ್ತಿಯಲ್ಲಿದ್ದರೂ ಸಹ 4ನೇ ಎದುರುದಾರರು ತನ್ನ ಪತಿ ಶ್ರೀ.ಧರ್ಮೇಶ್ ರವರಿಗೆ ಕ್ರಯದಂತೆ ದಾಖಲೆ ಮಾಡಲು ಸರ್ವೆ ನಕ್ಷೆ ತಯಾರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. 1ನೇ ಎದುರುದಾರರು ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ 4ನೇ ಎದುರುದಾರರು ತಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಂಬ ಕಾರಣಕ್ಕಾಗಿ ಅವರ ಪತಿ ಶ್ರೀ.ಧರ್ಮೇಶ್ ರವರಿಗೆ ಕ್ರಯದಂತೆ ದಾಖಲೆ ಮಾಡಲು ಸರ್ವೆ ನಕ್ಷೆ ತಯಾರಿಸಲು ಸಹಕಾರ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ಆಸ್ತಿ ಮೂಲತಃ ಮಠದ ಆಸ್ತಿಯಾಗಿದ್ದು, ಆ ಆಸ್ತಿಯಲ್ಲಿ ಶ್ರೀ.ಗುರುಮೂರ್ತಿಚಾರ್ ರವರು ಜಿಪಿಎ ಮೂಲಕ

ಮಾರಾಟ ಮಾಡಲು ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಮಾರಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾಧಿಕಾರಿಗಳ ವರದಿ, ಎದುರುದಾರರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1, 2 ಮತ್ತು 4ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಮೂರನೇ (3ನೇ) ಎದುರುದಾರರು ನಿವೃತ್ತರಾಗಿ 4 ವರ್ಷವಾಗಿರುವುದರಿಂದ, ಸದರಿಯವರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

13. ಅದಲ್ಲದೆ, 1, 2 ಮತ್ತು 4ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರು ದಿನಾಂಕ:30/04/2014 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ** 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1ನೇ ಎದುರುದಾರರು ದಿನಾಂಕ:30/04/2014ರಂದು ನಿವೃತ್ತಿ ಹೊಂದಿದ್ದಾರೆ.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.